# <u>ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ</u>

ಸಿ ಸಿ ನಂಬರ 1244/2023

| | | | |
|---|---|---|---|
| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |

ಸಾಕ್ಷಿದಾರರ ಹೆಸರು : ಸಿದ್ದಣ್ಣ

ತಂದೆಯ ಹೆಸರು : ಬಸ್ಸಣ್ಣ

ವಯಸ್ಸು : 39 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 23.01.2025

ಉದ್ಯೋಗ : ಕೆ ಎಸ್ ಆರ್ ಟಿ ಚಾಲಕ

ವಾಸ ಸ್ಥಳ : ಬಸವನಬಾಗೇವಾಡಿ

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-</u>**

ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು. ಅವರನ್ನು ದಿನಾಂಕ 15.02.2023 ರಂದು ದುಗ್ಗಾವತಿ ಹತ್ತಿರ ನೋಡಿರುತ್ತೇನೆ. ಬಸ್ಸ ಸಂಖ್ಯೆ ಕೆ ಎ 17, 1662 ಮಂತ್ರಾಲಯ ದಿಂದ ಹರಿಹರಕ್ಕೆ ಚಾಲಕನಾಗಿ ಹೋಗುತ್ತಿದ್ದೆ. ಮಾರ್ಗದಲ್ಲಿ ಹರಪನಹಳ್ಳಿ ಮೂಲಕ ಹಾದು ಹೋಗುವಾಗ ಬೈಕ್ ನಲ್ಲಿ ಮಹಾಂತೇಶ್ ಮತ್ತು ಸಂಗಪ್ಪ ನಮ್ಮ ಬಸ್ಸನ್ನು ಓವರ್ ಟೇಕ್ ಮಾಡಿಕೊಂಡು ಬಂದು ಬೈದಿರುತ್ತಾರೆ. ಬಸ್ಸ ನಲ್ಲಿ ಇದ್ದ ಪ್ರಯಾಣೀಕರು ಇವರನ್ನು ತೊಂದರೆ ಮಾಡುತ್ತಿದ್ದ ಕಾರಣ ಇವರನ್ನು ಪೋಲೀಸ ಠಾಣೆ ಕರೆದುಕೊಂಡು ಹೊಗೋಣ ಬಸ್ಸನ್ನು ಸೈಡಿಗೆ ಹಾಕಿ ಅಂತಾ ಹೇಳಿದರು. ಸದರಿಯವರು ಬೈಕನ್ನು ನಿಲ್ಲಿಸದೇ ನಮ್ಮ ಮುಂದೆ ಅಡ್ಡಾ ದಿಡ್ಡಿ ಆಗಿ ಹೋದರು. ದುಗ್ಗಾವತಿ ಬಸ್ಸ ನಿಲ್ದಾಣದ ಹತ್ತಿರ ಬಸ್ಸಗೆ ಅಡ್ಡ ಗಟ್ಟಿ ಸೂಳೆ ಮಗನೆ ಗಾಡಿಯನ್ನು ಸರಿಯಾಗಿ ಓಡಿಸಲು ಆಗುವುದಿಲ್ಲಾ ಅಂತಾ ಬೈದಿರುತ್ತಾರೆ. ನನ್ನ ಕೊರಳ ಪಟ್ಟಿ ಹಿಡಿದು ಎಳೆದಿರುತ್ತಾರೆ. ಕರಿಯಪ್ಪ ಬಸ್ಸನಿಲ್ದಾಣದಲ್ಲಿ ಕುಳಿತಿದ್ದವರು ನನ್ನ ಕಪಾಳಕ್ಕೆ ಹೊಡೆದಿರುತ್ತಾರೆ. ನಾನು ಪ್ರಜ್ಞೆ ತಪ್ಪಿ ಬಿದ್ದೆ. ಬಸ್ಸ ನಿರ್ವಾಹಕ ಮತ್ತು ಪ್ರಯಾಣಿಕರು ನನಗೆ ನೀರು ಕುಡಿಸಿದರು. ಕೊಟ್ಟೂರು ಜಾತ್ರೆ ಇದ್ದ ಪ್ರಯುಕ್ತ ಬಹಳಷ್ಟು ಟ್ರಾಫಿಕ್ ಆದ ಕಾರಣ ನಾನು ಬಸ್ಸನ್ನು ಓಡಿಸಿಕೊಂಡು ಹರಿಹರಕ್ಕೆ ಬಂದೆ. ಹರಿಹರದಲ್ಲಿ ನನಗೆ

ಸಿ ಸಿ ನಂಬರ 1244/2023

| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |
|---|---|---|---|

ಬಹಳ ತ್ರಾಸು ಆಯಿತು. ಮತ್ತ ಬಸ್ಸನಲ್ಲಿ ಹರಪನಹಳ್ಳಿ ಬಂದು ಡಿಪೋದಲ್ಲಿ ಬಸ್ಸನ್ನು ಬಿಟ್ಟು ಸರ್ಕಾರಿ ಆಸ್ಪತ್ರೆಯಲ್ಲಿ ತೋರಿಸಿದೆ. ವೈದರು 2 ಗುಳಿಗೆ ಕೊಟ್ಟು ಮಾರನೇ ದಿನ ಬರಲು ಹೇಳಿರುತ್ತಾರೆ. ಮಾರನೇ ದಿನ ನಾನು ಹಲವಾಗಲು ಆಸ್ಪತ್ರೆಗೆ ಹೋಗಿ ನಂತರ ಪೋಲೀಸ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇನೆ. ದೂರನ್ನು ನಿ ಪಿ 1 ಎಂದು, ಸಾಕ್ಷಿ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ಸಂಜೆ ಪೋಲೀಸರು ನನ್ನನ್ನು ಘಟನಾ ಸ್ಥಳಕ್ಕೆ ಅಂದರೆ ದುರ್ಗಾವತಿ ಬಸ್ಸ ನಿಲ್ದಾಣಕ್ಕೆ ದಿನಾಂಕ 16.02.2023 ರಂದು ಕರೆದುಕೊಂಡು ಹೋಗಿರುತ್ತಾರೆ. ಪೋಟೋ ತೆಗೆದಿರುತ್ತಾರೆ. ನನ್ನೊಂದಿಗೆ ಸದಾನಂದ ಇದ್ದರು ಹೆಸರು ಸರಿಯಾಗಿ ಗೊತ್ತಿಲ್ಲಾ. 5 ರಿಂದ 6 ಗಂಟೆಯವರೆಗೆ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ನಿ ಪಿ 2 ಎಂದು, ಸಾಕ್ಷಿ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ನಕಾಶೆ ನಿ ಪಿ 3 ಎಂದು, ಸಾಕ್ಷಿ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು. ಪುನಃ ನನ್ನನ್ನು ಹಲವಾಗಲು ಪೋಲೀಸ ಠಾಣೆಗೆ ಕರೆಯಿಸಿ ಆರೋಪಿತರ ಬೈಕ್ ಹತ್ತಿರ ನಿಲ್ಲಿಸಿ ಒಂದು ಪೋಟೋ ತೆಗೆದರು. ಆಗ ಮಧ್ಯಾಹ್ನ 1.30 ಗಂಟೆ ಆಗಿತ್ತು. ಬೈಕನ್ನು ವಶಪಡಿಸಿಕೊಂಡಿರುತ್ತಾರೆ. ಜಪ್ತು ಪಂಚನಾಮೆ ನಿ ಪಿ 4 ಎಂದು, ಸಾಕ್ಷಿ ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು. ಹಿಂದಿನಿಂದ ಬೈಕ್ ನಲಿ ಓವರ್ ಟೇಕ್ ಮಾಡಿ ಹೊಡೆದ ಕಾರಣ ಅವಮಾನ ಆಗಿರುತ್ತದೆ.

**(ಈ ವೇಳೆಯಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸದರಿ ಸಾಕ್ಷಿಯು ಪೋಲೀಸರಿಗೆ ಕೊಟ್ಟಿರುವುದಾಗಿ ಹೇಳಲಾದ ಹೇಳಿಕೆಯನ್ನು ಪರಿಶೀಲಿಸಲಾಯಿತು. ಅದರಲ್ಲಿರುವ ಸಂಗತಿಗಳಿಗೆ ವ್ಯತಿರಿಕ್ತವಾಗಿ ಸಾಕ್ಷಿದಾರರು ಪುರಾವೆ ಹೇಳಿರುವುದರಿಂದ ಇವರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ನ್ಯಾಯಾಲಯವು ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿಯನ್ನು ಕಲ್ಪಿಸಲಾಗಿದೆ.)**

**ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-**

ಸಿ ಸಿ ನಂಬರ 1244/2023

| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |
|---|---|---|---|

ಆರೋಪಿತರು ನನ್ನ ಸರ್ಕಾರಿ ಕೆಲಸಕ್ಕೆ ಅಡ್ಡಿ ಪಡಿಸಿರುತ್ತಾರೆ ಎಂದರೆ ಸರಿ. ಆರೋಪಿತರು ಕೈಯಿಂದ ಕಾಲಿಂದ ನನ್ನ ಕೈಗೆ ಕಪಾಳಕ್ಕೆ ಹೊಟ್ಟೆಗೆ ಹೊಡೆದಿರುತ್ತಾರೆ ಎಂದರೆ ಸರಿ. ಸ್ಥಳ ಪಂಚನಾಮೆ ಕಾಲಕ್ಕೆ ಚಾ ಸಾ 2 ಮತ್ತು ಚಾ ಸಾ 3 ರವರು ಇದ್ದರು ಎಂದರೆ ಸರಿ. ಪೋಲೀಸ ಠಾಣೆ ಯಲ್ಲಿ ಜಪ್ತು ಪಂಚನಾಮೆ ಮಾಡುವ ಕಾಲಕ್ಕೆ ಚಾ ಸಾ 4 ಮತ್ತು 5 ರವರು ಹಾಜರಿದ್ದರು ಎಂದರೆ ಸರಿ. ಪೋಲೀಸ ಠಾಣೆ ಜಪ್ತು ಪಂಚನಾಮೆಯನ್ನು ಸಮಯ 12 ರಿಂದ 1 ಗಂಟೆಯವರೆಗೆ ಮಾಡಿರುತ್ತಾರೆ ಎಂದರೆ ಸರಿ. ಆರೋಪಿತರ ಬೆಕ್ ಕೆ ಎ 35 ಎಸ್ 1160 ನಿ ಪಿ 4 ರ ಅಡಿಯಲ್ಲಿ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**(ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.